ಅಸಲು ದಾವಾ ನಂಃ 22/2023
ಪಿ ಡಬ್ಲ್ಯುಃ 02

<u>ದಿನಾಂಕಃ **20-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ **2** ರಿಂದ **4** ರ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದಃ</u>

ನಾನು ಅಂಗನವಾಡಿ ಕಾರ್ಯಕರ್ತೆ ಎಂದು 36 ವರ್ಷದಿಂದ ಕೆಲಸ ಮಾಡುತ್ತಾ ಇರುತ್ತೇನೆ. ನಾನು ಸದರಿ ಅಂಗನವಾಡಿ ಕಾರ್ಯಕರ್ತೆ ಕೆಲಸ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನಮಗೆ ನೀಡುವ ವೇತನ ಬಹಳಾ ಕಡಿಮೆ ಇರುತ್ತದೆ ಎಂದು ಪ್ರತಿ ವರ್ಷ ನಾವು ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತೇವೆ ಎಂದರೆ ಸರಿ. ನಾನು ಈ ದಾವೆಯನ್ನು ನನ್ನ ಗಂಡನ ಆಸ್ತಿಯಲ್ಲಿ ಪಾಲು ಬೇಕು ಎಂದು ದಾವೆ ಹೂಡಿರುತ್ತೇನೆ. ಈಗ ನನ್ನ ಗಂಡ ನನ್ನ ಜೊತೆ ವಾಸ ಇರುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಅಸಲು ದಾವೆ ಸಂಖ್ಯೆ 12/2022 ಬಗ್ಗೆ ಹೇಳಿದ್ದು ಅದು ನಿಮ್ಮ ಗಮನಕ್ಕೆ ಯಾವಾಗಿ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಆ ಕಾಲಕ್ಕೆ ಬೈಕಿನಿಂದ ಬಿದ್ದ ಕಾರಣ ನನ್ನ ತಲೆಗೆ 13 ಹೊಲಿಗೆಗಳನ್ನು ಹಾಕಲಾಗಿರುತ್ತದೆ. ನನಗೆ ತಲೆಗೆ ಪೆಟ್ಟಾದ್ದ ಕಾರಣ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಧಾರ ತೆಗೆದುಕೊಳ್ಳಲು ಕಷ್ಟ ಆಗುತ್ತದೆ ಎಂದರೆ ಸರಿ.

2. ಮೂಲ ದಾವೆ ಸಂಖ್ಯೆ 12/2022 ರ ತೀರ್ಮಾನ ಆದ ನಂತರ ನಾವು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಪಡಿತರ ಚೇಟಿ ಒಟ್ಟಿಗೆ ಇತ್ತು ಎಂದು ಉತ್ತರಿಸುತ್ತಾರೆ. ಮೂಲ ದಾವೆ ಸಂಖ್ಯೆ 12/2022 ರ ರಾಜಿ ಅರ್ಜಿಯ ದಾಖಲೆಯನ್ನು ನಾನು ಓದಿರುತ್ತೇನೆ. ಸದರಿ ರಾಜಿ ಅರ್ಜಿಯ ಪ್ರಕಾರ ನನ್ನ ಗಂಡನಿಗೆ ಅವರ ಪಾಲಿನ ಆಸ್ತಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ನಮ್ಮ ವಕೀಲರು ಹೇಳಬೇಕು ಎಂದು ಉತ್ತರಿಸುತ್ತಾರೆ. ಮೂಲ ದಾವೆ ಸಂಖ್ಯೆ 12/2022 ರ ರಾಜಿ ಅರ್ಜಿಯ ಪ್ರಕಾರ ಈ ದಾವೆಯ ದಾವಾ ಸ್ವತ್ತು 1 ಮತ್ತು 2 ರಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

3. ಈ ದಾವೆಯಲ್ಲಿ ನನ್ನ ಗಂಡ 1 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನಮ್ಮ ವಕೀಲರು ತಿಳಿಸಿರುತ್ತಾರೆ. ಸದರಿಯವರು ತಮ್ಮ ಪ್ರತಿವಾದ ಪತ್ರದಲ್ಲಿ ರಾಜಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ ಸಾಕ್ಷಿ

ಮುಂದುವರೆದು ನನಗೆ ತಿಳಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಮೂಲ ದಾವೆ ಸಂಖ್ಯೆ 12/2022 ರ ರಾಜಿ ಅರ್ಜಿಯನ್ನು ಎಲ್ಲಾದರು ಪ್ರಶ್ನೆ ಮಾಡಿರುತ್ತೀರ ಎಂದರೆ ಸಾಕ್ಷಿ ಈಗ ಇಲ್ಲಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅನಗತ್ಯ ವಿಚಾರಗಳನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದಿಯರ ಮೇಲೆ ಸುಳ್ಳು ಆರೋಪಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ವಸಂತ ಇವರ ಹೆಸರಿನಲ್ಲಿ ಇರುವ ಮನೆ ಚಾವಲ್ಮನೆ ಗ್ರಾಮದ ಸರ್ವೆ ನಂಬರ್ 139 ರಲ್ಲಿ ಇರುತ್ತದೆ. ಸದರಿ ಮನೆಯನ್ನು ವಸಂತ ಇವರು ತಮ್ಮ ಸ್ವಂತ ಹಣದಿಂದ ಖರೀದಿಸಿದ್ದರು ನಾನು ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಈಗ ಸದರಿ ಮನೆಯಲ್ಲಿ ಬಾಡಿಗೆ ಆಧಾರದ ಮೇಲೆ ವಾಸ ಇರುತ್ತೇವೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ದಾವಾ ಸ್ವತ್ತು 1 ಮತ್ತು 2 ರಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾ ಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ನೇ ಪ್ರತಿವಾದಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ